5. ವಿತ್ತೀಯ ಕಾರ್ಯಕಲಾಪ

2011–12ನೇ ಸಾಲಿನ ಪೂರಕ ಅಂದಾಜುಗಳು (ಎರಡನೇ ಕಂತು)

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, 2011–12ನೇ ಸಾಲಿನ ಪೂರಕ ಅಂದಾಜುಗಳನ್ನು (ಎರಡನೇ ಕಂತು) ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ಮಂಡಿಸಲಾಗಿದೆ.

ಅಧ್ಯಕ್ಷರು:– ಈಗ ನಿಯಮ 69ರ ಮೇರೆಗೆ ಮುಂದುವರೆದ ಚರ್ಚೆ, ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣವಾ?

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆ ತೆಗೆದುಕೊಂಡು ಮಧ್ಯಾಹ್ನ ಬರ ಪರಿಹಾರದ ಚರ್ಚೆ ಮುಂದುವರೆಸಿ.

ಶ್ರೀ ಸಿದ್ದರಾಮಯ್ಯ:–adjiournment motion ಮೂವ್ ಮಾಡಿರುವಂತಹ ವಿಚಾರ.

ಅಧ್ಯಕ್ಷರು:– ಆಮೇಲೆ ತೆಗೆದುಕೊಳ್ಳೋಣ. ಇವರು ಮುಗಿಸಲಿ. ನಂತರ ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ:– ಇನ್ನು ನಾಲ್ಕು ದಿನ ಅಷ್ಟೇ ಉಳಿದಿರುವಂಥದ್ದು. ಇನ್ನೂ ಒಂದು ವಿಚಾರ ಚರ್ಚೆ ಆಗಲಿಲ್ಲವೆಂದರೆ ಹೇಗೆ? ಮಾನ್ಯ ಅಧ್ಯಕ್ಷರೆ, ಇನ್ನೊಂದು ಮೂರು ದಿನ ಅಸೆಂಬ್ಲಿ ನಡೆಸಿ ಎಂದರೆ ನೀವು ಕೇಳುವುದಿಲ್ಲ. ನಮ್ಮ ಮಾತಿಗೆ ಕಿವಿ ಕೊಡುವುದಿಲ್ಲ. ಸರ್ಕಾರದವರು ಕೂಡ ಒಪ್ಪಿಕೊಳ್ಳುವುದಿಲ್ಲ. ಬರೀ ಒಂದೇ ಒಂದು adjiournment motion ಮೂವ್ ಮಾಡಿ ಇನ್ನೂ ಅದು ಮುಗಿದಿಲ್ಲ. ನೀವೂ ಕೂಡ ಇರಲಿಲ್ಲ. ನಾನು ಅರ್ಧಂಬರ್ಧ ಮಾಡಿ ನಿಲ್ಲಿಸಿದ್ದೇನೆ. ಇನ್ನು ಬೇಕಾದಷ್ಟು ವಿಚಾರಗಳನ್ನು MLA ಗಳೆಲ್ಲಾ ಕೊಟ್ಟಿದ್ದಾರೆ. ಗಮನ ಸೆಳೆಯುವ ಸೂಚನೆ ಇವೆ, ಬೇರೆ ಬೇರೆ ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ಮೂವ್ ಮಾಡುವವು ಇವೆ. ನಿಯಮ 69 ಹಾಗೂ ನಿಯಮ 60 ರಲ್ಲಿ ತರುವಂತಹವು ಇವೆ, There are so many issues. ಸರ್ಕಾರದವರು ಬಹಳ ದಿನ ಅಸೆಂಬ್ಲಿ ನಡೆಸಲಿಲ್ಲ. ಹಾಗಾಗಿ ಸಮಸ್ಯೆಗಳು ಬಹಳ ಅಗಾಧವಾಗಿವೆ. ಈ ಸರ್ಕಾರ ಸಮಸ್ಯೆಗಳನ್ನು ಬಹಳ ಬಗೆಹರಿಸಿಲ್ಲ. ಅದೂ ಬಂದಿರುವುದು ತಾಪತ್ರಯ. ಇವರು